# ಸಿದ್ರಾಮನ ಹೆಂಡತಿಯ ಗಂಡ

■ ವಿಕಾಸ ನೇಗಿಲೋಣಿ
ಕಲೆ: ರಘುಪತಿ ಶೃಂಗೇರಿ

ಇಬ್ಬರೇ ಕುಳಿತು ಟೀವಿ ನೋಡುವಾಗ ಅಪ್ಪ ಮಗ ಇಬ್ಬರಿಗೂ ಬೋರಾಗುತ್ತದೆ. ಅಮ್ಮ ಊರಿಗೆ ಹೋಗಿದ್ದಾಳೆ, ತಂಗಿ ಫ್ರೆಂಡ್ಸ್ ಜೊತೆ ಸ್ಲೀಪ್ ಓವರ್ ಪಾರ್ಟಿಗೆ ಅಂತ ಹೋಗಿದ್ದಾಳೆ. ಗಂಡಸರು ಮನೆಯಲ್ಲಿದ್ದರೆ ಮತ್ತೇನು ಮಾಡುತ್ತಾರೆ? ಟೀವಿ, ಟೀವಿ, ಹಸಿವಾದರೆ ಫ್ರಿಜ್ ಹುಡುಕಾಟ, ಅಷ್ಟೇ. ಹೀಗೆ ಅಪ್ಪ ಮಗ ಟೀವಿ ನೋಡಿ, ಬೋರಾಗಿ ಕುಳಿತಿದ್ದಾಗ ಸರಿಯಾಗಿ ಕರೆಂಟು ಹೋಯಿತು. ಐದು ನಿಮಿಷ ಕಳೆದರೂ ಅಪಾರ್ಟ್‌ಮೆಂಟಲ್ಲಿ ಯುಪಿಎಸ್ ಕೂಡ ಚಾಲೂ ಆಗಲಿಲ್ಲ. ಆಗ ಇದ್ದಕ್ಕಿದ್ದ ಹಾಗೇ ಅಪ್ಪ ಶುರುಮಾಡಿದ.

'ನನ್ನ ಕಾಲಿಗೆ, ಸರಿಯಾಗಿ ಮಂಡಿ ಭಾಗಕ್ಕೆ ಹುಲಿ ಬಾಯಿ ಹಾಕಿ ಒಂದು ತುತ್ತು ಎತ್ತಿಕೊಂಡು ಹೋಗಿಬಿಟ್ಟಿತ್ತು. ಹಾಗಾಗಿ ನೀನು ಗಮನಿಸಿದರೆ ನಾನು ಈಗ ಒಂದು ಕಾಲು ಸ್ವಲ್ಪ ಸೊಟ್ಟಗೆ ಹಾಕುತ್ತೇನೆ!'

ಕತ್ತಲಲ್ಲಿ ಮಗ ಗೊಕ್ಕನೆ ನಕ್ಕುಬಿಟ್ಟ.

'ಏನಂದ್ರಿ, ಹುಲಿ, ಕಾಲಿಗೆ ಬಾಯಿ ಹಾಕಿದ್ದು. ಹೋಗೀಪ್ಪ, ಯಾವುದೋ ನಾಯಿ ಕಚ್ಚಿ, ಇಂಜೆಕ್ಷನ್ ತೆಗೆದುಕೊಂಡಿರುತ್ತೀರಾ, ನಾಯಿ ಹೋಗಿ ಹುಲಿ ಆಗಿರತ್ತೆ. ಹುಲಿಗಳಲ್ಲಿ ಎಷ್ಟು ಪ್ರಭೇದ ಇರತ್ತೆ ಗೊತ್ತಾ? ಹುಲಿ ಒಂದು ಸಲ ಬಾಯಿ ಹಾಕಿ, ಒಂದು ತುತ್ತು ತಗೊಂಡು ನಿಮ್ಮನ್ನ ಹಾಗೇ ಬಿಟ್ಟು ಹೋಗಿರತ್ತೆ ಅಂತ ಅಂದ್ಕೊಂಡಿದ್ದೀರಾ, ವೈಫೈ ಇಲ್ಲ, ಇದ್ದಿದ್ದರೆ ಗೂಗಲ್ ಮಾಡಿ ಹೇಳ್ತಿದ್ದೆ. ನೀವೊಳ್ಳೆ'.

ಅಪ್ಪನಿಗೆ ಸಿಕ್ಕಾಪಟ್ಟೆ ಅವಮಾನ ಆಗಿಹೋಯಿತು.

ಹತ್ತೊಂಬತ್ತು ವರ್ಷದವನಿದ್ದಾಗ, ತನ್ನೂರಿನ ಮಸಣನೆತ್ತಿಯಲ್ಲಿ ನಡೆದ ಘಟನೆ. ಆಗ ಸರಿಯಾಗಿ ಕಾರು, ಬೈಕುಗಳೂ ಇರಲಿಲ್ಲ. ಬಸ್ಸಿಗೆ ಕಾಯಬೇಕು. ದಾವಣಗದ್ದೆಯ ಹಿರಿಯಣ್ಣ ರಕ್ತಸಿಕ್ತವಾಗಿದ್ದ ತನ್ನ ಎತ್ತಿಕೊಂಡು, ಹಾಗೇ ಓಡುತ್ತಿದ್ದ. ಅಪರೂಪಕ್ಕೆ ಕೊಲ್ಲೂರು ಶಿವಮೊಗ್ಗ ರಸ್ತೆಯಲ್ಲಿ ಓಡಾಡುವ ಪ್ರವಾಸಿಗರ ಕಾರಿಗೆ ಕೈ ಮಾಡುತ್ತಿದ್ದ. ಅವನು ಆವತ್ತು ತನ್ನನ್ನು ಹೊತ್ತುಕೊಂಡು ಜೀವನ್ಮರಣ ಹೋರಾಡದೇ ಹೋಗಿರುತ್ತಿದ್ದರೆ ತಾನಿವತ್ತು ಈ ಕತೆ ಹೇಳುವುದಕ್ಕೆ ಬದುಕಿಯೂ ಇರುತ್ತಿರಲಿಲ್ಲ. ಮಗ ನೋಡಿದರೆ ಎಲ್ಲಾ ಸಿಜಿ ಸೃಷ್ಟಿಯ ಸಿನಿಮಾಗಳನ್ನು ಅಲ್ಲಗಳೆಯುವಂತೆ, ಫಾರ್ವರ್ಡ್ ಮೆಸೇಜುಗಳನ್ನು ತಿರಸ್ಕಾರದಿಂದ ನೋಡುವಂತೆ ತನ್ನ ನಿಜವನ್ನೂ ಅವಮಾನಿಸುತ್ತಿದ್ದಾನೆ ಅಂತ ಮೈ ಉರಿದು ಹೋಯಿತು. ಕತ್ತಲಲ್ಲಿ ಎದ್ದು ಮೌನವಾಗಿ ಹೋಗಿ ಮಲಗಿಕೊಂಡು ಬಿಟ್ಟ.

ತಾನು ನಂಬದೇ ಇರುವುದಕ್ಕೇ ಅಪ್ಪ ತನ್ನ ಪ್ರಲಾಪವನ್ನ ನಿಲ್ಲಿಸಿದರು ಅಂತ ಅಂದುಕೊಂಡು ಯಾವುದೋ ನಾಲ್ಕಾರು ಹುಲಿ ಸ್ಟ್ಯಾಟಿಸ್ಟಿಕ್ಸ್ ಕೊಟ್ಟು, ಪಕ್ಕದಿಂದ ಉತ್ತರ ಬರದೇ, ಝಗ್ಗನೆ ಕರೆಂಟು ಬಂದು, ಕೂತ ಅಪ್ಪನ ಜಾಗ ಖಾಲಿಯಾಗಿದ್ದು ನೋಡಿ ಮಗನಿಗೆ ಅಚ್ಚರಿಯಾಯಿತು.

***

ಅಪ್ಪನಿಗೆ ಒಂದು ಹೆಸರಿತ್ತು, ಆದರೆ ಸಿಂಹನಗದ್ದೆಯ ರಾಮಚಂದ್ರ ಊರವರೆಲ್ಲರ ಬಾಯಲ್ಲಿ ಸಿದ್ರಾಮಾ ಆಗಿದ್ದ. ಸಿದ್ರಾಮನಿಗೆ ಕಾಡು ಸುತ್ತುವ ಚಟ, ಹೆಗಲಿಗೊಂದು ಕೋವಿ ಹಾಕಿಕೊಂಡು ರಜೆ ಅಂತಿಲ್ಲ, ಚಳಿಗಾಲ ಅಂತಿಲ್ಲ, ಮಳೆಗಾಲ ಅಂತಿಲ್ಲ. ಕಾಡುಮೇಡು ಸುತ್ತುವುದೇ ಅವನ ಕಾಯಕ. ಕಾಡಲ್ಲಿ ಗೊತ್ತಿಲ್ಲದ ಸದ್ದುಗಳು, ಗೊತ್ತಿರುವ ಸದ್ದುಗಳು, ಮೌನ, ಹೆಜ್ಜೆ ಸಪ್ಪಳ, ಕ್ರಿಮಿಕೀಟಗಳ ಸುಳಿದಾಟ ಹೀಗೆ ಎಲ್ಲವೂ ಅವನಿಗೆ ಒಂಥರ ಆನಂದ ಒದಗಿಸುವ ಸಂಗತಿಗಳು. ಒಂದು ಸಲ ಅವನು ಕೋವಿ ಇಲ್ಲದೇ ಹೋಗಿದ್ದಾಗ, ಇನ್ನೇನು ಮನೆ ಕಡೆಗೆ ಬರಬೇಕು ಅನ್ನುವಷ್ಟರಲ್ಲಿ ಕಾಡುಕೋಣ ಹಾಗೇ ಧುತ್ತನೆ ಎದುರು ಬಂದು ನಿಂತುಬಿಟ್ಟಿತ್ತು. ಅವನನ್ನು ಕಂಡು ಅದು ಹೆದರಿಯೋ, ಅದನ್ನು ಕಂಡು ಅವನು ಹೆದರಿಯೋ ಇಬ್ಬರೂ ಹಾಗೇ ಕಣ್ಣೆಟ್ಟಂತೇ ನಿಂತಿದ್ದರು. ಅದೆಷ್ಟೋ ಹೊತ್ತು, ಅವನಂತೂ ಅಲ್ಲೇ ಮೂತ್ರ ಮಾಡಿಕೊಂಡಿದ್ದ ಹೊರತೂ ಇಂಚು ಕದಲಿರಲಿಲ್ಲ.

ಕತ್ತಲಾವರಿಸಿದ್ದಕ್ಕೋ ಏನೋ, ಅದು ಕದಲುವುದು ಅವನಿಗೆ ಗೊತ್ತಾಯಿತು, ಅದರ ಪ್ರತಿ ಚಲನೆಗಳೂ ಅವನ ಕಿವಿಗೆ ಬಿದ್ದವು. ಅದು ಅವನ ಪಕ್ಕದಿಂದಲೇ ಹಾದು ಅಂತರ್ಧಾನವಾಯಿತು. ಅದು ಅವನಿಗೆ ಜೀವದಾನ ಮಾಡಿ ಬಿಟ್ಟು ಕಳಿಸಿತ್ತು ಅನ್ನಿಸುತ್ತದೆ. ಅದು ತನ್ನ ಕೊಲ್ಲದೇ ಬಿಟ್ಟು ಹೋಗಿದ್ದು ಕಂಡು ಸಿದ್ರಾಮನಿಗೆ ಎಷ್ಟು ಅವಮಾನವಾಗಿತ್ತೆಂದರೆ ಎಲ್ಲಾದರೂ ಸಿಕ್ಕರೆ ಅದನ್ನು ಕೊಂದು, ಅದಕ್ಕಿಂತ ತಾನು ಶಕ್ತಿಶಾಲಿ ಅಂತ ತೋರಿಸಿಕೊಳ್ಳಬೇಕು ಅಂತ ಕೋವಿ ಹಿಡಿದು ಬಹಳ ದಿನಗಳ ಕಾಲ ಕಾಡು ಕಾಡು ಅಲೆದಿದ್ದ. ಆದರೆ ಅದು ಕಡೆಗೂ ಕಾಣಿಸಿಕೊಳ್ಳಲೇ ಇಲ್ಲ.

ಅದಾದ ಮೇಲೆ ಸಾಕಷ್ಟು ಕಾಡುಪ್ರಾಣಿಗಳು ಅವನ ಕೋವಿಗೆ ಬಲಿಯಾಗಿದ್ದವು. ಆಜಾನುಬಾಹುವಾದ, ಕಡಿಮೆ ಮಾತಾಡುವ, ಚಕಚಕನೆ ಸರಸರನೆ ವೇಗವಾಗಿ ಓಡಾಡಬಲ್ಲ ಅವನ ರೂಪ, ಯೌವನಕ್ಕೆ ಕೆಲವು ಹೆಣ್ಮಕ್ಕಳು ಸಿಕ್ಕಿದ್ದರು. ತೋಟ ಇಳಿಯಲು ಮಾಡಿದ ಮಣ್ಣಿನ ಮೆಟ್ಟಿಲ ಮೇಲೆ, ಯಾರೂ ಬರದಂಥ ಪಾಳು ಬಿದ್ದ ಶಾಲೆಯ ಶೌಚಾಲಯದ ಮೋಟುಗೋಡೆ ಪಕ್ಕ ಅವರ ಸಂಬಂಧ ಕಾವು ಪಡೆದಿತ್ತು. ಕಾಡನ್ನೆಲ್ಲ ಸುತ್ತಿ, ಸುಸ್ತಾದ ದೇಹಕ್ಕೆ ಹುಡುಗಿಯರ ಕಾವು ಅತೀವ ಸುಖವನ್ನು ಕೊಟ್ಟಿತ್ತು. ತಾನು, ತನ್ನ ದೇಹ, ತನ್ನ ಶಕ್ತಿ ಸಾಮರ್ಥ್ಯ, ತನ್ನ ಧೈರ್ಯದ ಬಗ್ಗೆ ಹೆಮ್ಮೆ ಹೊಂದಿರುವಾಗಲೇ ಮಸಣನೆತ್ತಿಯ ಹುಲಿ ಎದುರಾಗಿದ್ದು. ಕಾಡುಕೋಣದ ಮೇಲಿನ ಕೋಪಕ್ಕೆ ಹುಲಿಯ ಮೇಲೆ ನಾಡಕೋವಿಯನ್ನು ಪ್ರಯೋಗಿಸಹೋಗಿದ್ದ. ಆ ಹುಲಿಗೆ ಕೋಪ ಅದೆಲ್ಲಿತ್ತೋ, ಛಂಗನೆ ಅವನ ಮೇಲೆ ಹಾರಿತ್ತು, ನಾಡಕೋವಿಯನ್ನು ಕೆಳಚೆಲ್ಲುತ್ತಲೇ ಮಂಡಿಯ ಖಂಡವನ್ನು ಒಂದೇ ಗುಕ್ಕಿಗೆ ಕಚ್ಚಿ, ಓಡಿ ಹೋಗಿತ್ತು. ರಕ್ತದ ಮಡುವಿನಲ್ಲಿ ಬಿದ್ದ ಅವನನ್ನು ಪೇಟೆಯಿಂದ ವಾಪಾಸಾಗುತ್ತಿದ್ದ ಹಿರಿಯಣ್ಣ ನೋಡಿ, ಹೇಗೋ ಪ್ರವಾಸಿ ಕಾರಲ್ಲಿ ಕೂರಿಸಿಕೊಂಡು ಪೇಟೆಗೆ ಕರೆದೊಯ್ದಿದ್ದ.

***

ಮಗ ತನ್ನ ಕೋಣೆಯ ಲೈಟ್ ಆಫ್ ಮಾಡಿ, ಬಾಗಿಲು ಎಳೆದುಕೊಂಡು ಹೋಗುತ್ತಲೇ ಚಿಪ್ಪೇ ಎಗರಿರುವ ಮಂಡಿಯನ್ನು ಸಿದ್ರಾಮ ಸವರಿಕೊಂಡ, ಪ್ರಮುಖ ಅಂಗವೊಂದು ಖಾಲಿಯಾದ ಮೇಲೆ ಆ ಜಾಗದಲ್ಲಿ ಉಳಿಯುವ ಹೊಂಡದಂತೆ ಮಂಡಿ ಗುಂಡಿಯಾಗಿ ಕೈಗೆ ತಾಗಿತು.

ಡಾಕ್ಟರ್ ಆ ಕಾಲಕ್ಕೆ ಅದೇನೋ ಚಿಕಿತ್ಸೆ ಮಾಡಿದ್ದರು. ಆದರೆ ಮೊಣಕಾಲನ್ನು ಮಡಿಸಲಾಗುವುದಿಲ್ಲ, ಸದ್ಯ ಪ್ರಾಣ ಉಳಿದದ್ದು ಹೆಚ್ಚು ಅಂತ ಕಳಿಸಿಕೊಟ್ಟಿದ್ದರು. ಕಾಡಲ್ಲಿ ಬಿದ್ದು ಏಟಾಯಿತು ಅಂತ ಹೇಳಿ ಹಿರಿಯಣ್ಣನಿಂದ ಹುಲಿಯ ವಿಷಯ ಮುಚ್ಚಿಟ್ಟ. ಹಿರಿಯಣ್ಣ ಮೊಣಕಾಲಿನ ಮಂಡಿಯೇ ಕಾಣೆಯಾದ ವಿಚಾರವನ್ನು ಊರವರಿಂದ ಮುಚ್ಚಿಟ್ಟ. ಆಗಲೇ ಅಪ್ಪಾಮ್ಮ ನೋಡಿದ್ದ ಹುಡುಗಿಯ ಜೊತೆ ಮದುವೆ ನಿಕ್ಕಿಯಾಯಿತು. ಹೊಂಬಣ್ಣದ ಮುಖ, ಉದ್ದ ಕೂದಲಿನ ಚೆಲುವೆ, ಪುಟ್ಟ ಪುಟ್ಟ ಕಣ್ಣುಗಳಿಂದ ನೋಡುತ್ತಿದ್ದ ಹದಿನೆಂಟು ವರ್ಷದ ಸುಂದರಿ ಮದುವೆ ದಿನ ನಕ್ಕಿದ್ದಳು. ನಕ್ಕಾಗ ಅವಳ ಕಣ್ಣುಗಳಲ್ಲಿ ಇದ್ದ ಜ್ವಾಲೆಗೆ ಸಿದ್ರಾಮ ಬೆಚ್ಚಗಾದರೂ ಬಾಗದಿರುವ ಮೊಣಕಾಲು ಅವನನ್ನು ಅಣಕಿಸಿ, ನಖಶಿಖಾಂತ ಬೆವರಿ ಹೋಗಿದ್ದ. ಆ ಒಂದು ಅವಘಡದ ತರುವಾಯ ಮೊಣಕಾಲು ಮಡಚಿಕೊಂಡು ಕೂರದೇ, ಕೂರುವುದನ್ನೇ ತಪ್ಪಿಸಿಕೊಳ್ಳುತ್ತಾ ತಿರುಗಾಡುತ್ತಿದ್ದ. ಮದುವೆಯ ಮೂರೂ ದಿನ ಮಾತ್ರ ಕೂರುವುದು ಅನಿವಾರ್ಯವಾಯಿತು. ಮೊದಲ ದಿನ ಹೇಗೋ ಕಷ್ಟಪಟ್ಟನಾದರೂ ಮೂರು ದಿನ ಕಳೆವ ಹೊತ್ತಿಗೆ, ಮದುವೆಯೆಲ್ಲ